**SC No. 202/2021**
**PW-2**

**ದಿನಾಂಕ 07–11–2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಲಾಯಿತು ಮತ್ತು ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಆರ್ ಎಸ್ ಎಂ ವಕೀಲರಿಂದಃ**

ಚಾಸಾ–1 ನನ್ನ ಅಣ್ಣ ಎಂದರೆ ಸರಿ. ಕೃತ್ಯ ನಡೆದ 3 ದಿನಗಳ ಮೊದಲು ನಾಯಿ ವಿಚಾರಕ್ಕೆ ನನಗೂ ಆರೋಪಿತರಿಗೂ ಗಲಾಟೆ ಆಗಿತ್ತು. ನಮ್ಮ ನಾಯಿಯನ್ನು ಕಟ್ಟಿ ಹಾಕುತ್ತೇವೆ ಎಂದರೆ ಸರಿಯಲ್ಲ. ಆರೋಪಿತರ ಕೃತ್ಯಕ್ಕೆ ಸಂಬಂಧಿಸಿದಂತೆ ನಮ್ಮ ಊರಿನಲ್ಲಿ ಪಂಚಾಯಿತಿ ಆಗಿಲ್ಲ. ಪಂಚಾಯಿತಿ ಮಾಡಿ ನನಗೆ 10 ಸಾವಿರ ರೂ ದಂಡ ಹಾಕಿದ್ದರು ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ ಮಚ್ಚಿನಿಂದ ಹೊಡೆದಿಲ್ಲ ಎಂದರೆ ಸರಿಯಲ್ಲ. 2 ರಿಂದ 5 ನೇ ಆರೋಪಿತರು ನನ್ನನ್ನು ತಬ್ಬಿಹಿಡಿದುಕೊಂಡಿಲ್ಲ ಎಂದರೆ ಸರಿಯಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಸಾಕಷ್ಟು ಜನ ಓಡಾಡುತ್ತಾರೆ ಎಂದರೆ ಸರಿ . ನಾನು ಆರೋಪಿತರು ಮನೆಯ ಮುಂದೆ ಬಂದಾಗ ಬೇರೆ ಯಾರು ಇರಲಿಲ್ಲ. ಕೃತ್ಯ ನಡೆದ ಸ್ಥಳದಲ್ಲಿ ಆರೋಪಿತರನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ದೂರು ನೀಡಿರುವ ನನ್ನ ಅಣ್ಣನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಮಧ್ಯಪಾನ ಮಾಡಿದ ಅಮಲಿನಲ್ಲಿ ಆಕಸ್ಮಿಕವಾಗಿ ಚೂಪಾದ ಕಲ್ಲುಗಳ ಮೇಲೆ ಬಿದ್ದು , ಪೆಟ್ಟು ಮಾಡಿಕೊಂಡಿದ್ದೇನೆ ಎಂದರೆ ಸರಿಯಲ್ಲ. ಯಾವ ಯಾವ ಆರೋಪಿತರು ನನಗೆ ಹೊಡೆದರು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರಿಗೂ ನಮಗೂ ವೈಮನಸ್ಸು ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಮದ್ಯಪಾನ ಮಾಡುವ ಅಭ್ಯಾಸವಿದೆ ಎಂದರೆ ಸರಿಯಲ್ಲ. 1 ನೇ ಆರೋಪಿ ನನಗೆ

ಮಚ್ಚಿನಿಂದ ಹೊಡೆದು ಕೊಲೆ ಮಾಡಲು ಪ್ರಯತ್ನ ಪಟ್ಟ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

**ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**

ಓ ಹೇ ಕೇ ಸರಿ ಇದೆ ಎಂದು ಒಪ್ಪಿದ ಮೇರೆಗೆ,

ಎಂಟನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು, ಹುಣಸೂರು ಪೀಠ.